## ಸೂಕ್ತಿಪ್ರಭ

ಎಲ್ಲ ಸಂದರ್ಭಗಳಲ್ಲೂ ಶಾಂತನಾಗಿದ್ದು, ತಳಮಳಗೊಳ್ಳದ ವ್ಯಕ್ತಿ ಉಳಿದವರಿಗಿಂತ ಸದಾ ಒಂದು ಹೆಜ್ಜೆ ಮುಂದಿರುತ್ತಾನೆ. —ಥಾಮಸ್ ಜೆಫರ್‌ಸನ್

ಒಂಟಿಯಾಗಿ ಸ್ವಲ್ಪ ಹೊತ್ತು ಕುಳಿತು ಆಲೋಚಿಸುವುದಕ್ಕೆ ಎಂದೂ ಯಾರೂ ಹೆದರಬಾರದು.

—ಲೋರೀನ್ ಹ್ಯಾನ್ಸ್‌ಬರಿ

ಮತ್ತೊಬ್ಬರಿಗೆ ನೀವು ಮಾಡಬಹುದಾದ ಎಲ್ಲಕ್ಕಿಂತ ದೊಡ್ಡ ಉಪಕಾರ ಎಂದರೆ ಅವನಲ್ಲೇ ಇರುವ ಸಂಪತ್ತನ್ನು ತೋರಿಸಿಕೊಡುವುದು. ನಿಮ್ಮ ಸಂಪತ್ತನ್ನು ಹಂಚಿಕೊಳ್ಳುವುದಕ್ಕಿಂತ ಇದು ಉತ್ತಮ. —ಬೆಂಜಮಿನ್ ಡಿಸ್ರೇಲಿ

ಕೆಲವು ಮಹನೀಯರ ಅದ್ಭುತ ಕ್ರಿಯೆಗಳಿಂದ ಇತಿಹಾಸವು ಸೃಷ್ಟಿಯಾಗಿದ್ದರೂ, ಜನಸಾಮಾನ್ಯರ ಯಥೇಚ್ಛ ಕೊಡುಗೆಗಳೇ ಅದಕ್ಕೆ ನಿರ್ದಿಷ್ಟ ರೂಪವನ್ನು ನೀಡುವುದು.

—ಮಾರ್ಕ್ ಯೋಸ್ಟ್

ಒಂದು ದೊಡ್ಡ ಗುಡ್ಡವನ್ನು ಹತ್ತಿ ನೋಡಿದ ಮೇಲೆ ಮತ್ತಷ್ಟು ಗುಡ್ಡಗಳನ್ನು ದಾಟಬೇಕೆಂಬುದು ಗೊತ್ತಾಗುವುದು.

—ನೆಲ್ಸನ್ ಮಂಡೇಲಾ

ಈ ಜಗತ್ತು ಅದ್ಭುತಗಳಿಂದ, ಐಶ್ವರ್ಯದಿಂದ, ಆಶ್ಚರ್ಯಗಳಿಂದ, ಅಸಾಧ್ಯ ಶಕ್ತಿಯಿಂದ ಹಾಗೂ ಒಗಟುಗಳಿಂದ ತುಂಬಿದೆ. ಅದು ನಮ್ಮನ್ನು ಭಯಗೊಳಿಸಬಹುದು, ದುಃಖಿಗಳನ್ನಾಗಿಸಬಹುದು, ದಿಗ್ಭ್ರಮೆಗೊಳಿಸಬಹುದು, ಆಶ್ಚರ್ಯಗೊಳಿಸಬಹುದು ಹಾಗೂ ಆನಂದಗೊಳಿಸಲೂಬಹುದು. ಆದರೆ ಬೇಸರ ತರುವಂತಹದ್ದು ಅದರಲ್ಲಿ ಯಾವುದೂ ಇಲ್ಲ. ನಮ್ಮಲ್ಲಿನ ಯಾವುದೋ ಕೊರತೆಯೇ ಬೇಸರಕ್ಕೆ ಕಾರಣವೇ ಹೊರತು ಈ ಜಗತ್ತು ಅದಕ್ಕೆ ಕಾರಣವಲ್ಲ.

—ಟೋನಿ ಫ್ಲೋರ್ಸ್

ನಿಮ್ಮೊಡನೆ ಗಾಂಧಿ ಅಥವಾ ಐನ್‌ಸ್ಟೈನ್ ಮಾತನಾಡುತ್ತಿದ್ದಾರೆಂದು ಭಾವಿಸಿಕೊಳ್ಳಿ. ಸಂಗೀತ ಕಚೇರಿಗೆ ಹೋದಾಗ ಮೊಜಾರ್ಟ್ ಅಥವಾ ಮತ್ತ್ಯಾರೋ ಉತ್ತಮ ಕಲಾವಿದನೊಬ್ಬನು ನಿಮ್ಮೊಡನೆ ಮಾತನಾಡುತ್ತಿರುವನೆಂದು ಭಾವಿಸಿ. ದೇಶಕಾಲಗಳನ್ನು ಮೀರಿದ ಅತ್ಯುತ್ತಮ ವ್ಯಕ್ತಿಗಳ, ಮೇಧಾವಿಗಳ ವಿಚಾರಗಳು ನಿಮಗೆ ಕೇಳಿಬರುತ್ತಿವೆ ಎಂದು ಭಾವಿಸಿದಾಗ ಅದು ನಿಮ್ಮಲ್ಲಿ ಹಿರಿಮೆಯನ್ನು ತರುವುದು.

—ಯೋ-ಯೋ ಮಾ

ಇತಿಹಾಸ ಎಲ್ಲವನ್ನೂ ಹೇಳಿಕೊಡುವುದು, ಭವಿಷ್ಯವನ್ನೂ ಕೂಡ. —ಲಾ ಮಾರ್ಟಿನ್

ಇತಿಹಾಸದಿಂದ ನಾವು ಏನೂ ಕಲಿಯುವುದಿಲ್ಲ ಎಂಬುದೇ ಇತಿಹಾಸ ಕಲಿಸುವ ದೊಡ್ಡ ಪಾಠ. —ಹೆಗೆಲ್

## ಪ್ರಾರ್ಥನೆ

### ಉಮಾಮಹೇಶ್ವರ ಸ್ತೋತ್ರಂ

ನಮಃ ಶಿವಾಭ್ಯಾಂ ಜಗದೀಶ್ವರಾಭ್ಯಾಂ
ಜಗತ್ಪತಿಭ್ಯಾಂ ಜಯ ವಿಗ್ರಹಾಭ್ಯಾಂ ।
ಜಂಭಾರಿಮುಖ್ಯೈರಭಿವಂದಿತಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಂ ॥

ಕಲ್ಯಾಣಕರರೂ, ಜಗದೀಶ್ವರರೂ, ಜಗದ್ರಕ್ಷಕರೂ, ಜಯಸ್ವರೂಪಿಗಳಾದವರೂ, ಜಂಭಾಸುರ ಶತ್ರುವಾದ ಇಂದ್ರನೇ ಮುಂತಾದ ದೇವತೆಗಳಿಂದ ವಂದಿತರೂ ಆದ ಶಂಕರ-ಪಾರ್ವತಿಯರಿಗೆ ಮತ್ತೆ ಮತ್ತೆ ನಮನಗಳು.

ನಮಃ ಶಿವಾಭ್ಯಾಂ ಪರಮೌಷಧಾಭ್ಯಾಂ
ಪಂಚಾಕ್ಷರೀಪಂಜರರಂಜಿತಾಭ್ಯಾಂ ।
ಪ್ರಪಂಚಸೃಷ್ಟಿಸ್ಥಿತಿಸಂಹೃತಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಂ ॥

ಮಂಗಳಸ್ವರೂಪರೂ, ಭವರೋಗಕ್ಕೆ ಉತ್ಕೃಷ್ಟವಾದ ಔಷಧಸ್ವರೂಪರೂ, 'ನಮಃ ಶಿವಾಯ' ಪಂಚಾಕ್ಷರೀ ಮಂತ್ರವೆಂಬ ಪಂಜರದಿಂದ ಶೋಭಿತರೂ, ಲೋಕದ ಸೃಷ್ಟಿ -ಸ್ಥಿತಿ-ಸಂಹಾರ ಕಾರಣರೂ ಆದ ಶಂಕರ-ಪಾರ್ವತಿಯರಿಗೆ ನಮಸ್ಕಾರಗಳು.

ನಮಃ ಶಿವಾಭ್ಯಾಮತಿಸುಂದರಾಭ್ಯಾ-
ಮತ್ಯಂತಮಾಸಕ್ತಹೃದಂಬುಜಾಭ್ಯಾಂ ।
ಅಶೇಷಲೋಕೈಕಹಿತಂಕರಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಂ ॥

ಶುಭವನ್ನು ನೀಡುವವರೂ, ಬಹು ರಮಣೀಯರೂ, ತಮ್ಮಲ್ಲಿ ಅತ್ಯಂತ ಆಸಕ್ತಿಯನ್ನು ಹೊಂದಿರುವ ಭಕ್ತರ ಹೃದಯಕಮಲಗಳಲ್ಲಿ ನೆಲಸಿರುವವರೂ, ಸಮಸ್ತಲೋಕಕ್ಕೂ ಏಕಮಾತ್ರ ಹಿತಕಾರಿಗಳೂ ಆದ ಶಂಕರ-ಪಾರ್ವತಿಯರಿಗೆ ಪದೇ ಪದೇ ವಂದನೆಗಳು.

ನಮಃ ಶಿವಾಭ್ಯಾಂ ಕಲಿನಾಶನಾಭ್ಯಾಂ
ಕಂಕಾಲಕಲ್ಯಾಣವಪುರ್ಧರಾಭ್ಯಾಂ ।
ಕೈಲಾಸಶೈಲಸ್ಥಿತದೇವತಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಂ ॥

ಶುಭಪ್ರದರಾದ, ಕಲಿಪುರುಷನ ಹಾನಿಯನ್ನು ನಾಶಗೊಳಿಸುವ, ಕೈಲಾಸ ಪರ್ವತದಲ್ಲಿ ವಾಸಿಸುವ, ರುಂಡಮಾಲಾಧರನಾದ ದೇವ ಶಂಕರನಿಗೂ, ಮಂಗಳಂಕರಿ ದೇವಿ ಪಾರ್ವತಿಗೂ ಪುನಃ ಪುನಃ ಪ್ರಣಾಮಗಳು.